MVC No. 39/2022 - -

PW – 1

ದಿನಾಂಕಃ 11.02.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ –

ಕೆಎ 17 ಬಿ 2654 ಕಾರಿನಲ್ಲಿ ಅಪಘಾತವಾಗುವಾಗ ನಾವು ಒಟ್ಟು 4 ಜನ ಶಿರಹಟ್ಟಿಯಿಂದ ದಾವಣಗೆರೆಗೆ ಪ್ರಯಾಣಿಸುತ್ತಿದ್ದೆವು. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಆಸ್ಪತ್ರೆಯ ದಾಖಲೆ ಮತ್ತು ಪೊಲೀಸ್ ದಾಖಲೆಯನ್ನು ಓದಿ ತಿಳಿದುಕೂಂಡಿದ್ದೇನೆ. ಅಪಘಾತದ ಬಗ್ಗೆ 1 ನೇ ಎದುರುದಾರ ಪೊಲೀಸರಿಗೆ ದೂರು ನೀಡಿದ್ದಾರೆ ಎಂದರೆ ಸರಿ. ಆ ದೂರಿನಲ್ಲಿ ಗಂಗಾಧರ ಬಿನ್ ಈಶ್ವರಚಾರಿ ಕಾರು ಚಲಾಯಿಸುತ್ತಿದ್ದ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಆದರೆ ನವೀನನೇ ಕಾರು ಓಡಿಸುತ್ತಿದ್ದ. ಅದರ ಆಧಾರದ ಮೇಲೆ ಪೊಲೀಸರು ಗಂಗಾದರ ವಿರುದ್ಧ ಪ್ರ ವ ವರದಿ ದಾಖಲು ಮಾಡಿದ್ದಾರು ಎಂದರೆ ಸರಿ. ಆ ನಂತರದಲ್ಲಿ ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ನಾನು ನನ್ನ ಜೂತೆ ಇದ್ದ ಕಾಳಮ್ಮ ಇಬ್ಬರೂ ಸದರಿ ಗಂಗಾಧರ ಬಿನ್ ಈಶ್ವರಚಾರಿ ಕಾರು ಚಲಾಯಿಸುತ್ತಿದ್ದ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡುವಾಗ ನವೀನ್ ರವರೇ ಕಾರು ಚಲಾಯಿಸುತ್ತಿದ್ದರು ಎಂದು ಹೇಳಿದ್ದೇನೆ. ಸದರಿ ನಮ್ಮ ಹೇಳಿಕೆಗಳನ್ನು ನ್ಯಾಯಾಲಯದಲ್ಲಿ ಹಾಜರಪಡಿಸಲು ಯಾವುದೇ ತೊಂದರೆ ಇಲ್ಲ. ನಮ್ಮ ಹೇಳಿಕೆಯಲ್ಲಿ ಗಂಗಾಧರ ಬಿನ್ ಈಶ್ವರಚಾರಿ ಕಾರು ಚಲಾಯಿಸುತ್ತಿದ್ದ ಎಂದು ಹೇಳಿರುವುದರಿಂದ ಸದರಿ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಗಂಗಾಧರ ಬಿನ್ ಈಶ್ವರಚಾರಿ ನನ್ನ ಮಗನ ಸ್ನೇಹಿತ. 1 ನೇ ಎದುರುದಾರ ನನ್ನ ಮಗ ಎಂದರೆ ಸರಿ. ನನಗೂ ಮತ್ತು ನನ್ನ ಮಗನಿಗೂ ಗಂಗಾಧರನ ಡಿ ಎಲ್ ತಂದು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತವಾದ ಸಮಯದಲ್ಲಿ ಗಂಗಾಧರನ ಬಳಿ ಡಿ ಎಲ್ ಇರಲಿಲ್ಲ ಎಂದರೆ ಸರಿ. ಅದೇ ಕಾರಣದಿಂದ ನವೀನ ಕಾರು ಚಲಾಯಿಸುತ್ತಿದ್ದ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಕಾಳಮ್ಮ ಮತ್ತು ನವೀನ ಹಾಗೂ ರಾಣೆಬೆನ್ನೂರು ಪೊಲೀಸರು ಅಪಘಾತ ಪರಿಹಾರ ಪಡೆಯುವ ಉದ್ದೇಶದಿಂದ ಗಂಗಾಧರ ಬಿನ್ ಈಶ್ವರಚಾರಿ ನ ಬದಲು ನವೀನನನ್ನು ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಗಂಗಾಧರ ಬಿನ್ ಈಶ್ವರಚಾರಿ ಆಸ್ಪತ್ರೆ ದಾಖಲೆಗಳಲ್ಲಿ ಸಹ ವಾಹನದ ಅಪಘಾತದಿಂದ ಆದ ಗಾಯ ಎಂದು ನಮೂದಾಗಿದೆ ಎಂದರೆ ನನಗೆ ತಿಳಿದಿಲ್ಲ. ಈ ಅಪಘಾತದಲ್ಲಿ ನವೀನನಿಗೆ ಯಾವುದೇ ಗಾಯಗಗಳಾಗಿಲ್ಲ ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿಯು ಗಾಯಗಳಾಗಿತ್ತು ಅದರೆ ಚಿಕಿತ್ಸೆ ಪಡೆದಿಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತದ ಸಮಯದಲ್ಲಿ ನವೀನ್ ಕಾರಿನಲ್ಲಿ ಇರಲಿಲ್ಲ ಆ ಕಾರಣಕ್ಕಾಗಿ ಆತನಿಗೆ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ವಿಮಾ ಕಂಪನಿಯಿಂದ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಅಪಘಾತದ ಕಥೆಯನ್ನು ಕಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಅಪಘಾತದ ನಂತರ ನನ್ನನ್ನು ರಾಣೆಬೆನ್ನೂರಿನ ಸರ್ಕಾರಿ ಆಸ್ಪತ್ರೆ ನಂತರ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೂ ಕರೆದುಕೊಂಡು ಹೋಗಲಾಗಿತ್ತು. ನನ್ನ ಆಸ್ಪತ್ರೆಯ ದಾಖಲೆಗಳ ಪ್ರಕಾರ ಹೊಟ್ಟೆಗೆ ಸಂಬಂದಪಟ್ಟಂತೆ ಎಸ್ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡದಿದ್ದೇನೆ ಎಂದರೆ ಸರಿ. ನನಗೆ ಲಿವರ್ ಅಪರೇಷನ್ ನನ್ನ ಡಾಃ ಪಾಟೀಲ್ ರವರು ಮಾಡಿದ್ದರು.ಎಸ್ ಎಸ್ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಡಾಃ ಪಾಟೀಲ್ ರವರ ಬಳಿ ಅನುಸರಣಾ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ಅಂಗನ್ಯೂನತೆ ಪ್ರಮಾಣ ಪತ್ರ ನೀಡಿರುವ ವೈದ್ಯರು ಮೂಳೆ ಮುರಿತ ವೈದ್ಯರು. ಅಪಘಾತದಿಂದ ನನ್ನ ಬೆನ್ನಿನ ಮೂಳೆಗೆ ಸ್ಕ್ರಾಚ್ ಆಗಿತ್ತು. ಇದಕ್ಕ ಸಂಬಂದಪಟ್ಟ ಎಕ್ಸರೇ ಮತ್ತು ಸಿಟಿ ಸ್ಕ್ಯಾನ್

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಒಳರೋಗಿ ಮತ್ತು ಹೊರರೋಗಿಯಾಗಿ ಡಾಃ ನಿತಿನ್ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ತೊಂದರೆ ಇರದೇ ಇದ್ದರೂ ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಪ್ರಮಾಣ ಪತ್ರ ಮಾಡಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ ನನಗೆ ಯಾವುದೇ ಅಂಗನ್ಯೂನತೆ ಅಥವಾ ತೂಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕಃ 10.03.1965. ಅಪಘಾತ ಕಾಲಕ್ಕೆ ನನಗೆ ನಿಖರವಾಗಿ 56 ವರುಷವಾಗಿತ್ತು ಎಂದರೆ ಸರಿ. ಪ್ರಮಾಣ ಪತ್ರದಲ್ಲಿ 25 ವರುಷ ಎಂದು ಬರೆಸಿದ್ದೇನೆ ಎಂದರೆ ನನ್ನ ಮಗ ಗೊತ್ತಾಗದೇ ಬರೆಸಿದ್ದಾನೆ ಎಂದು ಉತ್ತರಿಸಿರುತ್ತಾರೆ. ನನ್ನ ಉದ್ಯೋಗ ಮತ್ತು ವರಮಾನದ ಬಗ್ಗೆ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ